**ದಿನಾಂಕಃ18.03.2026 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ ಆರೋಪಿ ಪರ ಶ್ರೀ ಮತಿ ಹೆಚ್.ಬಿ.ಆರ್., ವಕೀಲರಿಂದಃ–**

1. ನಾನು ರಾತ್ರಿ 10.00 ಗಂಟೆ ಸಮಯದಲ್ಲಿ ಪೊಲೀಸ್ ಠಾಣೆಯಿಂದ ಗಸ್ತು ಕರ್ತವ್ಯಕ್ಕೆ ಹೋಗಿರುತ್ತೇನೆ. ನಾನು ದಿನಾಂಕ.02.09.2020 ರಂದು ಯಾವ ಯಾವ ಸ್ಥಳಕ್ಕೆ ಗಸ್ತು ಹೋಗಿದ್ದೆ ಎಂದು ಠಾಣಾ ದಿನಚರಿಯಲ್ಲಿ ನಮೂದು ಮಾಡಿಲ್ಲ. ದಿನಾಂಕ.03.09.2020 ರಂದು ಬೆಳಗಿನ ಜಾವ 05.00 ಗಂಟೆಗೆ ಮಸ್ಕಲ್ ಗ್ರಾಮಕ್ಕೆ ಹೋಗಿರುತ್ತೇನೆ. ಸದರಿ ಗ್ರಾಮದಲ್ಲಿ ಯಾವುದೇ ಗ್ರಾಮಸ್ಥರು ಕಂಡು ಬಂದಿರುವುದಿಲ್ಲ. ಆರೋಪಿತರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ನನಗೆ ನೆನಪಿಲ್ಲ. ಆರೋಪಿ ನನಗೆ ಯಾವುದೇ ಸ್ವ–ಇಚ್ಛೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

2. ದಿನಾಂಕ.04.09.2020 ರಂದು ಪಂಚನಾಮೆ ಜರುಗಿಸುವಾಗ ಗ್ರಾಮಸ್ಥರು ಇರಲಿಲ್ಲ, ಆದರೆ ಪಂಚರು ಇದ್ದರು. ಚಾಸಾ–4 ಮತ್ತು 5 ರವರನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ದಿನದಂದು ಹರಿಯಬ್ಬೆ ಗ್ರಾಮಕ್ಕೆ ಹೋಗಿಲ್ಲ, ಯಾವುದೇ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ದಿನಾಂಕ.05.09.2020 ರಂದು ಚಾಸಾ–6 ಮತ್ತು 7 ರವರಿಗೆ ಯಾವುದೇ ನೋಟೀಸ್ ನೀಡಿಲ್ಲ, ಯಾವುದೇ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ಚಾಸಾ–6 ಮತ್ತು 7 ರವರ ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

3. ಬೆಂಗಳೂರಿನ ಚೊಕ್ಕಸಂದ್ರ ಗ್ರಾಮಕ್ಕೆ ಹೋಗಿದ್ದಾಗ ಮಧ್ಯಾಹ್ನ 03.00 ಗಂಟೆ ಆಗಿತ್ತು. ಸದರಿ ಸ್ಥಳದಲ್ಲಿ 1 ನೇ ಆರೋಪಿತನ ಬೆಂಗಾವಲಿನ ಸಿಬ್ಬಂದಿ ಹಾಗೂ ಪಂಚರು ಮತ್ತು ಆಭರಣ ಪರೀಕ್ಷಕರು ಹಾಗೂ ಮನೆಯ ಮಾಲೀಕರಾದ ಶಶಿಕಲಾ ಎಂಬುವರು ಹಾಜರಿದ್ದರು. ಚೊಕ್ಕಸಂದ್ರ ಗ್ರಾಮಕ್ಕೆ ನಾನು ಹೋಗಿಲ್ಲ ಯಾವುದೇ ಆಭರಣಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

4. ಚಾಸಾ–8 ಮತ್ತು 11 ರಿಂದ 14 ರವರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರು, ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನ ಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.